


# ರಸಿಕರ ಕಂಗಳ ಸೆಳೆಯುವ ತೋಟ...

**ನೆದರ್ಲೆಂಡ್‌ನ 'ವೆಸ್ಟ್ ಬ್ರೂಕ್ ಪಾರ್ಕ್' ಗುಲಾಬಿ ಹೂಗಳಿಗೆ ಪ್ರಸಿದ್ಧವಾದುದು. ಗುಲಾಬಿಗಳ ಅಪೂರ್ವ ತಳಿಗಳ ಬಗ್ಗೆ ತಿಳಿದುಕೊಳ್ಳಲೆಂದೇ ವಿಶ್ವದ ವಿವಿಧ ಭಾಗಗಳಿಂದ 'ಗುಲಾಬಿ ಉದ್ಯಾನ'ಕ್ಕೆ ಬರುವವರಿದ್ದಾರೆ. ಗುಲಾಬಿಗಳ ವರ್ಣ ವಿಲಾಸದ ಮೋಹಕತೆಯನ್ನು ನೋಡಿಯೇ ಅನುಭವಿಸಬೇಕು.**

■ ಜಿ. ನಾಗೇಂದ್ರ



'ವಿಶ್ವ ನ್ಯಾಯಾಲಯ' ಇರುವ ನೆದರ್ಲೆಂಡ್‌ನ ಹೇಗ್ ಪಟ್ಟಣದ ಸಮೀಪವಿರುವ ಸ್ಕೇವೆನಿನ್ ಪರಿಸರದ ಆಕರ್ಷಣೆಗಳಲ್ಲೊಂದು 'ವೆಸ್ಟ್ ಬ್ರೂಕ್ ಪಾರ್ಕ್ ರೋಸ್ ಗಾರ್ಡನ್'.

ನಂ.35, ಚಾಪೆಲ್ ರೋಡ್ ವಿಳಾಸದ ಉದ್ಯಾನವನಕ್ಕೆ ಹೋಗುವ ದಾರಿಯ ಇಕ್ಕೆಲಗಳಲ್ಲಿ ಡಚ್ ಶೈಲಿಯ ಆಕರ್ಷಕ ಮನೆಗಳಿವೆ. ಪ್ರತಿಯೊಂದು ಮನೆಯ ಮುಂದೆ ಪುಟ್ಟ ಕೈತೋಟದಲ್ಲಿ ಬೆಳೆಯಲಾದ ಬಣ್ಣ ಬಣ್ಣದ ಆಕರ್ಷಕ ಹೂ ಗಿಡಗಳು, ಟ್ರಿಮ್ ಮಾಡಲಾದ ಗಿಡಗಳು. ಆ ಕೈತೋಟಗಳು ಮನೆಗಳ ಅಂದವನ್ನು ಹೆಚ್ಚಿಸಿದ್ದವು.

ನೆದರ್ಲೆಂಡ್‌ನ ಅತ್ಯಾಕರ್ಷಕ ಗುಲಾಬಿ ಉದ್ಯಾನವನವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಹಾಗೂ ಹೇಗ್ ಪಟ್ಟಣದ ಸಮೀಪವೇ ಇರುವ ವೆಸ್ಟ್ ಬ್ರೂಕ್ ಪಾರ್ಕ್‌ಗೆ ಕಾಲಿಡುತ್ತಿದ್ದಂತೆ ಬಣ್ಣ ಬಣ್ಣದ ಗುಲಾಬಿಗಳ ಲೋಕವೇ ಸಹೃದಯರಿಗೆ ಎದುರಾಗುತ್ತದೆ. ಆ ಗುಲಾಬಿಗಳನ್ನು ಕಂಡು ಎಂಥ ಅರಸಿಕರೂ ಕವಿಗಳಾ ಬೇಕು!

ಸುಮಾರು ಎಂಟು ಎಕರೆ ವಿಸ್ತೀರ್ಣದಲ್ಲಿ ನಿರ್ಮಿಸಲಾದ ಉದ್ಯಾನವನದಲ್ಲಿ ಸುಮಾರು 20 ಸಾವಿರ ಗುಲಾಬಿ ಪೊದೆಗಳನ್ನು ಹೊಂದಿರುವ 300ಕ್ಕೂ ಅಧಿಕ ಬಗೆಯ ಗುಲಾಬಿ ತಳಿಗಳಿವೆ. ಗಿಡಗಳ ತುಂಬಾ ಗೊಂಚಲು ಗೊಂಚಲುಗಳಾಗಿ ನೇತಾಡುತ್ತಿರುವ ಗುಲಾಬಿಗಳು ಮನಸ್ಸಿಗೆ ಮುದನೀಡುತ್ತವೆ. ಗುಲಾಬಿ ಉದ್ಯಾನದ ಮತ್ತೊಂದು ವಿಶೇಷ, ಹುಡುಕಿದರೂ ಸ್ವಲ್ಪವಾದರೂ ಕಸ ಕಡ್ಡಿ ಕಾಣುವುದಿಲ್ಲ. ಗೊಬ್ಬರ ತಯಾರಿಸಲೆಂದೇ ನಿಗದಿಪಡಿಸಲಾದ ಪ್ರತ್ಯೇಕ ಸ್ಥಳದಲ್ಲೂ ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ. ಹಲವು ತಳಿಗಳ ಗುಲಾಬಿ ಗಿಡಗಳು ಉದ್ಯಾನದಲ್ಲಿದ್ದು, ಒಂದು ಸೆಂಟಿ ಮೀಟರ್ ಅಗಲದ ಏಕದಳ ಗುಲಾಬಿಗಳಿಂದ ಹಿಡಿದು ನಾಲ್ಕೈದು ಇಂಚು ಅಗಲದ ವಿವಿಧ ಬಣ್ಣಗಳ ಗುಲಾಬಿಗಳನ್ನು ಹೊಂದಿರುವ ಪೊದೆಗಳು ಕಣ್ಣುಗಳಿಗೆ ಹಬ್ಬವನ್ನುಂಟುಮಾಡುತ್ತವೆ. ಚಪ್ಪರಗಳಿಗೆ ಹಬ್ಬಿಸಿರುವ ಬಳ್ಳಿ ಜಾತಿ ಗುಲಾಬಿ ಗಿಡಗಲೂ ಇದ್ದು, ಚಪ್ಪರಗಳ ರಚನೆಗೆ ಸ್ವಲ್ಪವೂ ಕುಂದುಬಾರದಂತೆ







